**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 3837/2021**

| | | | |
|---|---|---|---|
| **ಹೆಸರು** | **:** | **ರಮೇಶ** | **ದೋ.ಸಾ. 3** |
| **ತಂದೆಯ ಹೆಸರು** | **:** | **ಮರೆಪ್ಪ** | **ಪ್ರಾ.ಸಾ. 2** |
| **ವಯಸ್ಸು** | **:** | **25 ವರ್ಷ** | **ದಿನಾಂಕಃ 04-10-2023** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಪರದಾರ ಮೋತಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಪ್ರಾಸಾ-1 ಮತ್ತು ಚಾಸಾ-2 ರವರು ನನಗೆ ಗೊತ್ತು. ಈಗ ನೋಡುತಿರುವ ಎರಡು ಪಂಚನಾಮೆಗಳಲ್ಲಿರುವ ಸಹಿಗಳು ನನ್ನದೆ. ಸದರಿ ಪಂಚನಾಮೆಗಳನ್ನು ನಿಪಿ-5 ಮತ್ತು ನಿಪಿ-6 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-5 (ಎ) ಮತ್ತು ನಿಪಿ-6 (ಎ) ಗುರುತಿಸಲಾಯಿತು.

ನಿಪಿ-5 ರಲ್ಲಿರುವ ಸಹಿ ದಿನಾಂಕಃ 07-07-2021 ರಂದು ಮಧ್ಯಾಹ್ನ 3 ರಿಂದ 4 ಗಂಟೆ ಸುಮಾರಿಗೆ ಪ್ರಾಸಾ-1 ರವರ ಮನೆ ಹತ್ತಿರ ಪೊಲೀಸರು ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿದ್ದೇನೆ. ಪೊಲೀಸರು ಭಾವಚಿತ್ರವನ್ನು ಪಡೆದುಕೊಂಡಿದ್ದಾರೆ. ಈಗ ನೋಡುತಿರುವ ನಿಪಿ-3 ರ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ಪ್ರಾಸಾ-1 ರವರ ಮನೆ ಹತ್ತಿರ ಪಡೆದುಕೊಂಡಿದ್ದಾರೆ.

ಅದೇ ದಿನ 1 ಗಂಟೆಯಾದ ಮೇಲೆ ಚಾಸಾ-5 ರವರ ಮನೆ ಹತ್ತಿರ ನಿಪಿ-6 ರಲ್ಲಿ ಸಹಿ ಮಾಡಿದ್ದೇನೆ. ಈಗ ನೋಡುತಿರುವ ನಿಪಿ-4 ರ ಭಾವಚಿತ್ರದಲ್ಲಿ ನಾನು ಇದ್ದೇನೆ. ನಿಪಿ-4 ರ ಭಾವಚಿತ್ರವನ್ನು ಪೊಲೀಸರು ಚಾಸಾ-5 ರವರ ಮನೆ ಹತ್ತಿರ ಪಡೆದುಕೊಂಡಿದ್ದಾರೆ. ಪೊಲೀಸರು ನನ್ನ ಸಮಕ್ಷಮ ಯಾವದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಪಂಚನಾಮೆಗೆ, ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ

ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನಿಪಿ-5 ರಲ್ಲಿ ಸಹಿ ಮಾಡುವ ಸಮಯಕ್ಕೆ ಬೆಳಿಗ್ಗೆ 10 ರಿಂದ 11 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಸಹಿ ಮಾಡುವ ಸಮಯಕ್ಕೆ ಪುಧ್ಯಾಹ್ನ 12.00 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ಆ ದಿನ ಪೊಲೀಸರು ಪಂಚನಾಮೆ ಮಾಡಲು ಬಂದಾಗ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಆಗ ಪೊಲೀಸರು ನನ್ನ ಸಮಕ್ಷಮ ಒಂದು ಬಡಿಗೆಯನ್ನು ಜಪ್ತಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಯಾವದೇ ಜಗಳ ನೋಡಿಲ್ಲ ಎಂದು ನುಡಿಯುತ್ತಾರೆ. ಬಡಿಗೆ ನನ್ನ ಸಮಕ್ಷಮ ಜಪ್ತಿ ಮಾಡಿಕೊಂಡರು ಸಹ ಆರೋಪಿತರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರಿಂದಃ</u>**

ನಿಪಿ-5 ಮತ್ತು ನಿಪಿ-6 ರ ಸಂಗತಿಗಳು ಪೊಲೀಸರು ನನಗೆ ಓದಿ ಹೇಳಿಲ್ಲ ಹಾಗೂ ಅದರಲ್ಲಿರುವ ಸಂಗತಿಗಳು ನನಗೆ ಗೊತಿಲ್ಲ ಎಂದರೆ ಸರಿ. ಯಾವ ಕಾರಣಕ್ಕಾಗಿ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತಿಲ್ಲ ಎಂದರೆ ಸರಿ. ಪೊಲೀಸರು ಯಾವ ಕಾರಣಕ್ಕಾಗಿ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ಹೇಳಿಲ್ಲ ಹಾಗೂ ಪೊಲೀಸರು ಹೇಳಿದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನನಗೆ ಯಾವದೇ ವಿಷಯ ಗೊತಿಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳು ಯಾವ ಕಾರಣಕ್ಕಾಗಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತಿಲ್ಲ ಎಂದರೆ ಸರಿ. ಭಾವಚಿತ್ರವನ್ನು ಪಡೆದುಕೊಂಡಿರುವ ಬಗ್ಗೆ ಸಹ ನನಗೆ ಗೊತಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**